# ನಗರಸಭಾ ಕಾರ್ಯಾಲಯ, ರಾಮನಗರ

ನಸರಾ/ಕಾವಿ/ಟೆಂಡರ್/ಎಸ್.ಎಫ್.ಸಿ/ಜೆ.ಇ(1)/5/2006–07 ದಿ: 13–07–2006

## ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಮತ್ತು ನಗರಸಭೆಯಲ್ಲಿ 2006–07 ನೇ ಸಾಲಿನಲ್ಲಿ ನೋಂದಣಿ ಮಾಡಿಕೊಂಡ ಗುತ್ತಿಗೆದಾರರಿಂದ ಎಸ್.ಎಫ್.ಸಿ. ನಿಧಿಯಡಿಯಲ್ಲಿ (ರಾಜ್ಯ ಹಣಕಾಸು ಆಯೋಗ) ಈ ಕೆಳಕಂಡ ಕಾಮಗಾರಿಗಳಿಗೆ ನಿಗಧಿತ ನಮೂನೆಯಲ್ಲಿ ಮೊಹರಾದ ಐಟಂವಾರು ಟೆಂಡರ್‌ಗಳನ್ನು ಕ್ರ.ಸ 1 ರಿಂದ 4 ರವರೆಗೆ ಮತ್ತು ಉಳಿಕೆ 31 ಕಾಮಗಾರಿಗಳಿಗೆ ಶೇಕಡವಾರು ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ ಪೌರಾಯುಕ್ತರು ನಗರಸಭೆ, ರಾಮನಗರ ಇವರಿಂದ ಕರೆಯಲಾಗಿದೆ.

1. ಗುತ್ತಿಗೆದಾರರು ಸಂಬಂಧಿಸಿದ ಗುತ್ತಿಗೆ ನೋಂದಣಿ ಪ್ರತಿಯೊಂದಿಗೆ ಟೆಂಡರ್ ಫಾರಂಗಾಗಿ ಕೋರಿಕೆಯನ್ನು ದಿನಾಂಕ: 27–07–2006 ಸಾಯಂಕಾಲ 4.00 ಘಂಟೆಯೊಳಗಾಗಿ ಸಂಬಂಧಿಸಿದಂತೆ ಫಾರಂ ಶುಲ್ಕ ರೂ. 300=00+ ತೆರಿಗೆ ಪಾವತಿಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

2. ಖಾಲಿ ಟೆಂಡರ್ ಫಾರಂಗಳನ್ನು ದಿ: 10–08–2006 ಸಾಯಂಕಾಲ 5.00 ಘಂಟೆವರೆಗೆ ವಿತರಿಸಲಾಗುವುದು.

3. ಭರ್ತಿ ಮಾಡಿದ ಮೂಲ ಮತ್ತು ನಕಲು ಟೆಂಡರ್ ಫಾರಂಗಳನ್ನು ದಿ: 17–08–2006 ಸಾಯಂಕಾಲ 4.30 ಘಂಟೆಯೊಳಗಾಗಿ ಸ್ವೀಕರಿಸಲಾಗುವುದು ಹಾಗೂ ಟೆಂಡರ್‌ಗಳನ್ನು ಸಾಧ್ಯವಾದರೆ ಅದೇ ದಿನ ಅಥವಾ ಮುಂದಿನ ದಿನಗಳಲ್ಲಿ ಹಾಜರಿರುವ ಗುತ್ತಿಗೆದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.

4. ಇ.ಎಂ.ಡಿ. ಹಣವನ್ನು ನಗದಾಗಿ ಈ ನಗರಸಭೆಯಲ್ಲಿ ಪಾವತಿಸಿದ ರಶೀದಿ ಅಥವಾ ಪೌರಾಯುಕ್ತರ ಹೆಸರಿನಲ್ಲಿ ಡಿ.ಡಿ. ಖರೀದಿಸಿ ಲಗತ್ತಿಸುವುದು ಅಥವಾ ರಾಷ್ಟ್ರಿಯ ಉಳಿತಾಯ (NSC) ಪತ್ರವನ್ನು (ಹಾಲಿ ಚಾಲ್ತಿಯಲ್ಲಿರುವ) ಪೌರಾಯುಕ್ತರಿಗೆ ಪ್ಲೆಡ್ಜ್ ಮಾಡಿ ಪ್ರತಿ ಕಾಮಗಾರಿಗೆ ಪ್ರತ್ಯೇಕವಾಗಿ ಇ.ಎಂ.ಡಿ/ NSC ಹಣವನ್ನು ಸಲ್ಲಿಸತಕ್ಕದ್ದು ಇಲ್ಲವಾದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

5. ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಕಾಮಗಾರಿಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಮತ್ತು ಅಂದಾಜು ಪತ್ರಗಳನ್ನು ಪೂರ್ವಭಾವಿಯಾಗಿ ಪರಿಶೀಲಿಸಿಕೊಂಡು ಟೆಂಡರ್ ದರಪಟ್ಟಿ ಸಲ್ಲಿಸತಕ್ಕದ್ದು. ಆನಂತರ ತಕರಾರಿಗೆ ಅವಕಾಶವಿರುವುದಿಲ್ಲ. ಟೆಂಡರ್‌ದಾರರು ಪಿ.ಡಬ್ಲ್ಯೂ.ಡಿ ಕೋಡ್ 65 ರಲ್ಲಿ ನಮೂದಾಗಿರುವ ಎಲ್ಲಾ ಷರತ್ತುಗಳಿಗೂ ಬದ್ಧರಾಗಿರತಕ್ಕದ್ದು.

6. ಟೆಂಡರ್‌ದಾರರು ಟೆಂಡರ್ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

7. ಟೆಂಡರ್‌ದಾರರು ಟೆಂಡರ್ ಲಕೋಟೆಯ ಮೇಲೆ ಟೆಂಡರ್ ಕ್ರ.ಸಂ. ಮತ್ತು ಕಾಮಗಾರಿ ಹೆಸರನ್ನು ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು ಹಾಗೂ ಗುತ್ತಿಗೆದಾರರು ತಮ್ಮ ಪೂರ್ಣ ಅಂಚೆ ವಿಳಾಸವನ್ನು ಟೆಂಡರ್ ಲಕೋಟೆ ಮತ್ತು ಟೆಂಡರ್ ದರ ಪಟ್ಟಿಯಲ್ಲಿ ತಪ್ಪದೇ ಬರೆಯತಕ್ಕದ್ದು.

8. ಟೆಂಡರ್ ಮಂಜೂರಾತಿ ಪಡೆದ ಗುತ್ತಿಗೆದಾರರು ನಗರಸಭೆಯ ಪೌರಾಯುಕ್ತರು, ಅಭಿಯಂತರರು ನೀಡುವ ಸಲಹೆ ಮತ್ತು ತಾಂತ್ರಿಕ ನಿಯಮದಂತೆ ಕಾಮಗಾರಿ ನಿರ್ವಹಿಸಲು ಬದ್ಧರಾಗಿರತಕ್ಕದ್ದು.

9. ಕಾಮಗಾರಿ ನಿರ್ವಹಣೆಗೆ ಪಾವತಿಸಲಾಗುವ ಬಿಲ್ಲು ಮೊಬಲಗಿನ ನಂತರ ಬರಬಹುದಾದ ಯಾವುದೇ ಆಡಿಟ್ ಆಕ್ಷೇಪಣೆಗೆ ಗುತ್ತಿಗೆದಾರರನ್ನೇ ನೇರವಾಗಿ ಹೊಣೆಗಾರರನ್ನಾಗಿ ಗುರಿಪಡಿಸಲಾಗುತ್ತದೆ ಇದಕ್ಕೆ ಬದ್ದರಾಗಿರತಕ್ಕದ್ದು.

10. ಮಂಜೂರಾತಿ ಪಡೆದ ಗುತ್ತಿಗೆದಾರರು ನಿಗಧಿಪಡಿಸಿದ ಕಾಲಾವಧಿಯಲ್ಲಿ ಕಾಮಗಾರಿಯನ್ನು ನಿರ್ವಹಿಸದಿದ್ದಲ್ಲಿ ಅಂತಹ ಗುತ್ತಿಗೆದಾರರ ಬಗ್ಗೆ ಪಿ.ಡ್ಬ್ಲ್ಯೊ.ಡಿ–65ರ ಷರತ್ತುಗಳಲ್ಲಿ ನಮೂದಿಸಿರುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡ ನಂತರ ಸ್ಥಳದಲ್ಲಿ ಉಳಿಯಬಹುದಾದ ಅನುಪಯುಕ್ತ ಸಾಮಾಗ್ರಿಗಳನ್ನು ಅಭಿಯಂತರರ ಸೂಚನೆಯಂತೆ ತೆಗೆದುಹಾಕಿಸಿ ಸ್ವಚ್ಚಗೊಳಿಸಲು ಗುತ್ತಿಗೆದಾರರು ಬದ್ದರಾಗಿರತಕ್ಕದ್ದು.

11. ಟೆಂಡರ್ ಮಂಜೂರಾತಿಯು ನಗರಸಭೆ ಕಾಯ್ದೆ ಹಾಗೊ ನಿಯಾಮಾವಳಿಯಂತೆ ಕಾಯ್ದಿರಿಸಲಾಗಿದೆ.

PDF Created with deskPDF PDF Writer - Trial :: http://www.docudesk.com

12. ಟೆಂಡರ್ ಮಂಜೂರಾತಿಯಾದ ಗುತ್ತಿಗೆದಾರರು ಛಾಪಾ ಕಾಗದದ ಮೂಲಕ ಮುಚ್ಚಳಿಕೆ ಸಲ್ಲಿಸಿ ಒಂದು ವಾರದಲ್ಲಿ ಸಂಬಂಧಿಸಿದ ಅಭಿಯಂತರರುಗಳಿಂದ ಕಾಮಗಾರಿ ನಿರ್ವಹಣ ಸ್ಥಳವನ್ನು ಗುರ್ತು ಮಾಡಿಸಿಕೊಂಡು ಕಾಮಗಾರಿ ಪ್ರಾರಂಭಿಸತಕ್ಕದ್ದು ತಪ್ಪಿದಲ್ಲಿ ಠೇವಣಿ ಹಣವನ್ನು ನಗರಸಭೆಗೆ ಅಮಾನತ್ತುಗೊಳಿಸಿ ಈ ಕಾಮಗಾರಿ ನಿರ್ವಹಣೆಯಿಂದ ಉಂಟಾಗಬಹುದಾದ ನಷ್ಟ ಮತ್ತು ತುಷ್ಠಿಗಳಿಗೆ ಟೆಂಡರ್‌ದಾರರೇ ನೇರ ಹೊಣೆಗಾರರಾಗಿರುತ್ತಾರೆ. ಅಂತಹ ಗುತ್ತಿಗೆದಾರರುಗಳ ವಿರುದ್ಧ ಅಗತ್ಯ ಶಿಸ್ತಿನ ಕ್ರಮಕೈಗೊಳ್ಳಲಾಗುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಳ್ಳಲಾಗಿದೆ.

13. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ, ಹಿಂತೆಗೆದುಕೊಳ್ಳುವ ಅಥವಾ ರದ್ದು ಪಡಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

14. ಪೂರ್ಣಗೊಂಡ ಕಾಮಗಾರಿಯ ಅಂತಿಮ ಬಿಲ್ ಪಾವತಿಸಿದ ದಿನಾಂಕದಿಂದ ಮುಂದುವರೆದಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದ ಅವಧಿಯವರೆಗೆ ಗುತ್ತಿಗೆದಾರರೇ ಯಾವುದೇ ವೆಚ್ಚ ನಿರೀಕ್ಷಿಸದೆ ನಿರ್ವಯಿಸತಕ್ಕದ್ದು.

15. ಬಿಲ್ಲುಗಳಲ್ಲಿ ಸರ್ಕಾರ ಸೂಚಿಸಿರುವ ತೆರಿಗೆಗಳನ್ನು ಕಠಾಯಿಸಲಾಗುವುದು.

16. ಟೆಂಡರ್ ನಿಗಧಿತ ಷೆಡ್ಯೂಲ್ ದರಗಳಿಗಿಂತ ಕಡಮೆ ದರ ನಮೂದಿಸುವ ಗುತ್ತಿಗೆದಾರರು ಅಂತಹ ವ್ಯತ್ಯಾಸದ ಮೊತ್ತವನ್ನು ಡಿ.ಡಿ. ಮೂಲಕ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು ಮತ್ತು ನಿಗಧಿತ ವ್ಯತ್ಯಾಸದ ಮೊತ್ತಕ್ಕಿಂತ ಕಡಿಮೆ ಡಿ.ಡಿ. ಇದ್ದ ಪಕ್ಷದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.

17. ಟೆಂಡರ್ ಫಾರಂಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳವರ ಕಛೇರಿಯಲ್ಲಿಯೂ ವಿತರಿಸಲಾಗುವುದು ಮತ್ತು ಟೆಂಡರ್‌ನ್ನು ಸಹ ದಿ: 17–08–2006 ರಂದು ಸ್ವೀಕರಿಸಲಾಗುವುದು.

18. ಹೆಚ್ಚಿನ ವಿವರಗಳನ್ನು ಹಾಗೂ ಕಾಮಗಾರಿಗಳ ವಿವರಗಳನ್ನು ಕಛೇರಿ ವೇಳೆಯಲ್ಲಿ ಬಂದು ಪಡೆಯಬಹುದಾಗಿದೆ.

| ಕ್ರಮ ಸಂಖ್ಯೆ | ಕಾಮಗಾರಿ ವಿವರ | ಅಂದಾಜು ಮೊತ್ತ (ಲಕ್ಷ ರೂ. ಗಳಲ್ಲಿ | ಇ.ಎಂ.ಡಿ ಮೊತ್ತ | ಕೆಲಸ ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರನ ದರ್ಜೆ |
|---|---|---|---|---|---|
| 1 | ವಾರ್ಡ್ ನಂ. 4 ರ ಮೇದರ ಬೀದಿಯ ಬಿ.ಎಂ ರಸ್ತೆಯಿಂದ ಸ್ಮಶಾನದ ಕಾಂಪೌಂಡ್‌ವರೆಗೆ, ಧನ ಲಕ್ಷ್ಮೀ ಮನೆ ಪಕ್ಕದಲ್ಲಿ, ಶ್ರೀನಿವಾಸ್ ಮನೆ ಪಕ್ಕದಲ್ಲಿ ಮತ್ತು ಹೊಳೆ ರಸ್ತೆಗೆ ಹೋಗುವ ಅಡ್ಡ ರಸ್ತೆಗಳಾದ ರಾಮ ಕೃಷ್ಣ ಮನೆ ಪಕ್ಕದಲ್ಲಿ, ಶ್ರೀನಿವಾಸ್ ಮನೆ ಪಕ್ಕದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 7.96 | 15920 | 90 ದಿನಗಳು | 3 ನೇ ದರ್ಜೆ ಮತ್ತು ಮೇಲ್ಪಟ್ಟು |
| 2 | ವಾರ್ಡ್ ನಂ 5 ರ ಚಾಲಕ ಈರಪ್ಪ ಮನೆಯಿಂದ ನಾರಾಯಣಪ್ಪ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 5.10 | 10200 | 90 ದಿನಗಳು | ಡಿಟೋ |
| 3 | ವಾರ್ಡ್ ನಂ 9ರ ಶೆಟ್ಟಹಳ್ಳಿ ಬೀದಿಯಿಂದ ಪ್ಯಾರಿಜಾನ್ ಮತ್ತು ನೂರುಲ್ಲಾಖಾನ್ ಮನೆವರೆಗೆ ಹಾಗೂ ಅನ್ವರ್ ಮನೆ ಹತ್ತಿರ ಮತ್ತು ಮಾಜಿ ಕೌನ್ಸಿಲರ್ ರಶೀದ್ ಮನೆ ಹಿಂಭಾಗದ ರಸ್ತೆಗೆ ಕಾಂಕ್ರೀಟ್ ರಸ್ತೆ ನಿರ್ಮಿಸುವುದು. | 5.20 | 10400 | 90 ದಿನಗಳು | ಡಿಟೋ |
| 4 | ವಾರ್ಡ್.ನಂ.14 ರ ಮಸೀದಿ ಪಕ್ಕದಿಂದ ಸೀರ್ ಹಳ್ಳದವರೆಗೆ, ಖಾಜಾ ಮಕಾನ್‌ನಿಂದ (ನಾನಾ ದೊಡ್ಡಿ) ಅಕ್ರಂ ಮನೆವರೆಗೆ, ಹಳೇ ತಾಲ್ಲೂಕು ಕಛೇರಿ ಹಿಂಭಾಗ ಮತ್ತು ಡಾ॥ ಶರ್ಮ ಮನೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ. | 6.47 | 12940 | 90 ದಿನಗಳು | ಡಿಟೋ |

PDF Created with deskPDF PDF Writer - Trial :: http://www.docudesk.com

| | | | | | |
|---|---|---|---|---|---|
| 5 | ವಾರ್ಡ್ ನಂ. 3 ರ ಆಡಿಟರ್ ಶಿವಣ್ಣ ಮನೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ. | 2.57 | 6425 | 90 ದಿನಗಳು | ಡಿಟೋ |

PDF Created with deskPDF PDF Writer - Trial :: http://www.docudesk.com

| | | | | | |
|---|---|---|---|---|---|
| 6 | ವಾರ್ಡ್ ನಂ. 3 ರ ನಂಜಪ್ಪ ಬಡಾವಣೆಯ ಅಯುಬ್ ಮನೆ ಹತ್ತಿರ ಚರಂಡಿ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಾಣ. | 2.50 | 6250 | 90 ದಿನಗಳು | ಡಿಟೋ |
| 7 | ವಾರ್ಡ್ ನಂ 6 ರ ಚಾಮುಂಡೇಶ್ವರಿ ಬಡಾವಣೆಯ ಗೌರಮ್ಮನ ಮನೆಯಿಂದ ಕೆಂಪಯ್ಯ ಪ್ರಾಂಶುಪಾಲರ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 3.30 | 8250 | 90 ದಿನಗಳು | ಡಿಟೋ |
| 8 | ವಾರ್ಡ್ ನಂ 6 ರ ಚಾಮುಂಡೇಶ್ವರಿ ಬಡಾವಣೆಯ ಮಹೇಶ್ ಮನೆ ಮತ್ತು ಕೃಷ್ಣಪ್ಪ ಶೆಟ್ಟಿ ಮನೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ. | 1.78 | 4450 | 90 ದಿನಗಳು | ಡಿಟೋ |
| 9 | ವಾರ್ಡ್ ನಂ 8ರ ರಾಘವೇಂದ್ರ ಕಾಲೋನಿ ರೇವಣ್ಣ ಮ,ನೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ. | 2.38 | 5950 | 90 ದಿನಗಳು | ಡಿಟೋ |
| 10 | ವಾರ್ಡ್ ನಂ 9 ರ ಮದರ್‌ಖಾನ್ ಮೊಹಲ್ಲಾದ ಗೈಭಾನ್ ಮನೆ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 2.86 | 7150 | 90 ದಿನಗಳು | ಡಿಟೋ |
| 11 | ವಾರ್ಡ್ ನಂ 10 ರ ಮದರ್‌ಖಾನ್ ಮೊಹಲ್ಲಾದ ದರ್ಗಾ ಹತ್ತಿರದಿಂದ ಸಮದ್ ಮನೆವರೆಗೆ ಚರಂಡಿ ಹಾಗೂ ಕಾಂಕ್ರೀಟ್ ರಸ್ತೆ ನಿರ್ಮಾಣ. | 3.60 | 9000 | 90 ದಿನಗಳು | ಡಿಟೋ |
| 12 | ವಾರ್ಡ್ ನಂ 10 ರ ಮದರ್ ಖಾನ್ ಮೊಹಲ್ಲಾದ ಹಳೇ ಎಂ.ಸಿ. ರಸ್ತೆಯಿಂದ ಮಸೀದಿ ರಸ್ತೆವರೆಗೆ (ಆಗಾ ಸಾಹೇಬ್‌ರ ಮನೆ ರಸ್ತೆ) ಕಾಂಕ್ರೀಟ್ ರಸ್ತೆ ನಿರ್ಮಾಣ. | 2.90 | 7250 | 90 ದಿನಗಳು | ಡಿಟೋ |
| 13 | ವಾರ್ಡ್ ನಂ. 11 ರ ಶೇಖ್ ಮುಖ್ತಾರ್ ಮನೆಯಿಂದ ಮುಸ್ತಫಾ ಖಾನ್ ಮನೆವರೆಗೆ ಮತ್ತು ಮಹ್ಮದ್ ಅಮಾನುಲ್ಲಾ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 1.23 | 3075 | 90 ದಿನಗಳು | ಡಿಟೋ |
| 14 | ವಾರ್ಡ್ ನಂ. 11 ರ ಗೌಸಿಯ ನಗರದ ಬಾಬು ಮನೆಯಿಂದ .ಷಫಿ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 1.46 | 3650 | 90 ದಿನಗಳು | ಡಿಟೋ |
| 15 | ವಾರ್ಡ್ ನಂ. 11 ರ ಗೌಸಿಯ ನಗರದ ಆಬ್ದುಲ್ ಖಾದರ್ ಮನೆಯಿಂದ ಅಮೀರ ಜಾನ್ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 1.01 | 2525 | 90 ದಿನಗಳು | ಡಿಟೋ |
| 16 | ವಾರ್ಡ್ ನಂ. 13 ರ ಉರ್ದು ಸ್ಕೂಲ್‌ನಿಂದ ನಿಸಾರ್ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 1.98 | 4950 | 90 ದಿನಗಳು | ಡಿಟೋ |
| 17 | ವಾರ್ಡ್.ನಂ.15 ರ ಚರ್ಚ್ ಕಾಪೌಂಡ್ ಹಿಂಭಾಗದ ಅಯ್ಯುಬ್ ಮನೆ ಹತ್ತಿರ ಮತ್ತು ಸರ್ಕಾರಿ ಆಸ್ಪತ್ರೆ ಹಿಂಭಾಗದ ಸಲಾಂ ಮನೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ. | 1.50 | 3750 | 90 ದಿನಗಳು | ಡಿಟೋ |
| 18 | ವಾರ್ಡ್.ನಂ.15 ರ ಗುಲಾಬ್ ಯೂಸೂಫ್ ಮನೆ ಹತ್ತಿರ (ನಾಲಬಂದವಾಡಿ ಅಡ್ಡ ರಸ್ತೆ ) ಕಾಂಕ್ರೀಟ್ ರಸ್ತೆ ನಿರ್ಮಾಣ. | 1.88 | 4700 | 90 ದಿನಗಳು | ಡಿಟೋ |
| 19 | ವಾರ್ಡ್.ನಂ.15 ರ ನಾನಾ ದೊಡ್ಡಿಯ ಅಂಜದ್ ಹೋಟೆಲ್‌ನಿಂದ ಲಕ್ಷ್ಮೀ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 2.33 | 5825 | 90 ದಿನಗಳು | ಡಿಟೋ |

PDF Created with deskPDF PDF Writer - Trial :: http://www.docudesk.com

| | | | | | |
|---|---|---|---|---|---|
| 20 | ವಾರ್ಡ್.ನಂ.16ರ ಬಾಲಗೇರಿಯ ಪಾಪಚ್ಚಿ ಮನೆಯಿಂದ ಅರಳಿಕಟ್ಟೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 2.45 | 6125 | 90 ದಿನಗಳು | ಡಿಟೋ |
| 21 | ವಾರ್ಡ್.ನಂ.16ರ ಬಾಲಗೇರಿಯ ಯಳವಯ್ಯ ಮನೆಯಿಂದ ಮಾಸ್ಟರ್ ಮಾದಯ್ಯರವರ ಮನೆ ವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 1.06 | 2650 | 90 ದಿನಗಳು | ಡಿಟೋ |
| 22 | ವಾರ್ಡ್.ನಂ.20 ರ ತುರುಪಲಾಯದ ವೆಂಕಟೇಶ್ ಮನೆಯಿಂದ ಅಂತೋನಿ ಮೇರಿ ಮನೆವರೆಗೆ ಮತ್ತು ದಾಸ್ ಮನೆಯಿಂದ ಚಾಮದೊರೈ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 1.55 | 3875 | 90 ದಿನಗಳು | ಡಿಟೋ |
| 23 | ವಾರ್ಡ್.ನಂ.21 ರ **ಕೊತ್ತಿಪುರದ ಶ್ರೀನಿವಾಸ್ ಮನೆ ರಸ್ತೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ**. | 3.17 | 7925 | 90 ದಿನಗಳು | ಡಿಟೋ |
| 24 | ವಾರ್ಡ್.ನಂ.21 ರ ತುರುಪಲಾಯ ಜೋಗಯ್ಯನ ಮನೆಯಿಂದ ಹೊನ್ನಯ್ಯ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 2.55 | 6375 | 90 ದಿನಗಳು | ಡಿಟೋ |
| 25 | ವಾರ್ಡ್.ನಂ.23 ರ ಟಿಪ್ಪು ನಗರ ಮಸೀದಿ ಮುಂಭಾಗ ಕಾಂಕ್ರೀಟ್ ರಸ್ತೆ ಟಿಪ್ಪು ನಗರ ಮಸೀದಿಯಿಂದ ಸಿರಾಜ್ ಮನೆವರೆಗೆ ಚರಂಡಿ ಕಾಮಗಾರಿ | 1.14 | 2850 | 90 ದಿನಗಳು | ಡಿಟೋ |
| 26 | ವಾರ್ಡ್.ನಂ.24 ರ **ಯಾರಬ್ ನಗರದ 1 ನೇ ಬ್ಲಾಕ್‌ನ ಬಶೀರ್ ಮನೆಯಿಂದ ಫೈ ಜಾನ್ ಮನೆವರೆಗೆ ಕಾಂಕ್ರೀಟ್ ರಸ್ತೆ, ಜಕಾವುಲ್ಲಾ ಖಾನ್ ಮನೆಯಿಂದ ನಿಸಾರ್ ಮನೆವರೆಗೆ ಚರಂಡಿ ಕಾಮಗಾರಿ** | 1.87 | 4675 | 90 ದಿನಗಳು | ಡಿಟೋ |
| 27 | ವಾರ್ಡ್.ನಂ.25 ರ ಹನುಮಂತನಗರದ ಮಾದಯ್ಯ ಮನೆಯಿಂದ ಜಾಲಮಂಗಲ ರಸ್ತೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ ಮತ್ತು ಸುಮಿತ್ರಮ್ಮರವರ ಮನೆ ರಸ್ತೆಗೆ ಕಲ್ವರ್ಟ್ ನಿರ್ಮಾಣ. | 3.52 | 8800 | 90 ದಿನಗಳು | ಡಿಟೋ |
| 28 | ವಾರ್ಡ್ ನಂ 25 ರ ಮಂಜುನಾಥ ನಗರದ ಜೆ.ಜೆ.ನಾಯಕ್ ಮನೆ ಹತ್ತಿರ, ಕಲಾವತಿ ಮನೆ ಹಾಗೂ ರಾಜಮ್ಮ ಮನೆ ಮುಂಭಾಗ ಅಡ್ಡ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 1.82 | 4550 | 90 ದಿನಗಳು | ಡಿಟೋ |
| 29 | ವಾರ್ಡ್.ನಂ.26 ರ ಇಂದಿರಾನಗರದ ಬಡಾವಣೆಯ ಅರೇಬಿನ್ ಶಾಲೆಯಿಂದ ರಿಯಾಜ್ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 2.60 | 6500 | 90 ದಿನಗಳು | ಡಿಟೋ |
| 30 | ವಾರ್ಡ್.ನಂ.26 ರ ಸರ್ವೆ ನಂ. 4ರ ರಸ್ತೆಯಿಂದ ಮಾಗಡಿ ರಸ್ತೆವರೆಗೆ (ಉಮೇಶ್ ಅಂಗಡಿ ಹಿಂಭಾಗ) ಕಾಂಕ್ರೀಟ್ ರಸ್ತೆ ನಿರ್ಮಾಣ. | 1.26 | 3150 | 90 ದಿನಗಳು | ಡಿಟೋ |
| 31 | ವಾರ್ಡ್.ನಂ.26 ರ **ಇಂದಿರಾ ನಗರ ಮಹದೇವು ಮನೆಯಿಂದ ಚಲುವಮ್ಮ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ**. | 2.58 | 6450 | 90 ದಿನಗಳು | ಡಿಟೋ |
| 32 | ವಾರ್ಡ್.ನಂ.27 ರ ಲಿಯೋ ಟೆಂಟ್ ಹಿಂಭಾಗದ ಡೇವಿಡ್ ಮನೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ. | 1.48 | 3700 | 90 ದಿನಗಳು | ಡಿಟೋ |
| 33 | ವಾರ್ಡ್.ನಂ.28 ರ ಶಾನ್ ಥಿಯೇಟರ್ ಹಿಂಭಾಗದ ಗಂಗಮ್ಮ ಮನೆ ಹತ್ತಿರ ಮತ್ತು ಪ್ರೇಮ ಮನೆ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 3.60 | 9000 | 90 ದಿನಗಳು | ಡಿಟೋ |

PDF Created with deskPDF PDF Writer - Trial :: http://www.docudesk.com

| | | | | | |
|---|---|---|---|---|---|
| 34 | ವಾರ್ಡ್.ನಂ.28 ರ ಐಜೂರಿನ ಬಿ.ಎಂ. ರಸ್ತೆಯ (ಮಾಜಿ ಸದಸ್ಯರಾದ ಲಕ್ಷ್ಮಿದೇವಮ್ಮ ಮನೆ ಹಿಂಭಾಗ) ತಿಮ್ಮಯ್ಯ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 1.00 | 2500 | 90 ದಿನಗಳು | ಡಿಟೋ |
| 35 | ವಾರ್ಡ್.ನಂ.29 ರ ಐಜೂರು ಸರ್ವೆ ನಂ. 4ರ ರಸ್ತೆಯಿಂದ ಪ್ಯಾರಿಜಾನ್ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 2.62 | 6550 | 90 ದಿನಗಳು | ಡಿಟೋ |

| | | | |
|---|---|---|---|
| ಸಹಿ/- | ಸಹಿ/- | ಸಹಿ/- | ಸಹಿ/- |
| (ಸಯ್ಯದ್ ಖಿಜರ್ ಪಾಶ) | ( ನಾರಾಯಣಪ್ಪ) | ( ವೇದಮೂರ್ತಿ ) | (ಶಿವಣ್ಣ ) |
| ಅಧ್ಯಕ್ಷರು | ಉಪಾಧ್ಯಕ್ಷರು | ಅಧ್ಯಕ್ಷರು ಸ್ಥಾಯಿ ಸಮಿತಿ | ಪೌರಾಯುಕ್ತರು |
| ನಗರಸಭೆ,ರಾಮನಗರ | ನಗರಸಭೆ,ರಾಮನಗರ | ನಗರಸಭೆ,ರಾಮನಗರ | ನಗರಸಭೆ,ರಾಮನಗರ |

PDF Created with deskPDF PDF Writer - Trial :: http://www.docudesk.com